

ಬಿ.ಆರ್. ಲಕ್ಷ್ಮಣರಾವ್

ಕಲೆ: ಬಸವರಾಜ ಕಲೆಗಾರ

# ಹಂಬಲ


ಈಗಿಲ್ಲಿ ಉಳಿದಿರುವುದು ಬರೀ ಬೂದಿಯಷ್ಟೇ
ಈ ಅಗ್ಗಿಷ್ಟಿಕೆಯಲ್ಲಿ
ಅನ್ನಿಸಿದರೂ, ಕೆದಕುತ್ತಿದ್ದಾನೆ ಮುದುಕ
ಆಸೆ ಬಿಡದೆ.

ಉಳಿದಿದ್ದೀತೇ ಒಂದಾದರೂ ಕುಟುಕು ಜೀವದ ಕಿಡಿ
ಒಡಲೊಳಗಡಗಿಸಿಕೊಂಡ
ಬಿಳಿ ಶಾಲು ಹೊದ್ದ ಮುದಿ ಕೆಂಡ
ಎಂದು ಹುಡುಕುತ್ತ

ಕಡ್ಡಿ ಪುರುಳೆ ಮೇಲಿಟ್ಟು, ಉಫ್ ಉಫ್
ಗಾಳಿ ಊದುತ್ತ,
ಮತ್ತೆ ಹೊತ್ತೀತೇ ಜೀವಾಗ್ನಿ ಸಂಜೀವಿನಿ
ಮೈತಳೆದೀತೇ

ನನ್ನ ಅಂತರಾಳದ ಆ ಸುಮಧುರ ಸ್ವಪ್ನ
ಸಹಜೀವನ
ಎಂದು, ಹಂಬಲಿಸುತ್ತ, ಕಾಯುತ್ತಿದ್ದಾನೆ
ಕಾತರದಿಂದ

ಆ ಭವಿ.
ಹಾಗೆಯೇ ಈ ಕವಿ.



Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68